ಕವಿತಾಕಲಾಪ.

ವಿ. ವೆ. ತೊರ್ಕೆ.

(ಚಂದಿರಾನಂದ)

[illegible]	[illegible]	[illegible]	ಡಿನದ	ದಿನದ
೨೦	೧೯	೧	ಕತ್ತರಿಯುಂ	ಕತ್ತುರಿಯುಂ
೨೦	೧೯	೪	ಪೂಜ್ಯನಹುದು	ಪೂಜ್ಯನಹನು.

ಕವಿತಾಕಲಾಪ.

ಇದನ್ನು

ವಿಠೋಬಾ ವೆಂಕ ನಾಯಕ ತೊರ್ಕೆ,

(ಚಂದಿರಾನಂದ)

ಅಸಿಸ್ಟಂಟ ಮಾಸ್ತರ ಕನ್ನಡಶಾಲಾ ತೊರ್ಕೆ,

ಇವರು ರಚಿಸಿದರು.

ತೊರ್ಕೆ.

೧೯೨೯.

ಬೆಲೆ ೩ ಆಣೆಗಳು

ಇದನ್ನು ನಾರಾಯಣ ಸುಬ್ರಹ್ಮಣ್ಯಶಾಸ್ತ್ರೀ ಛಡತಿ, ಇವರು ತಮ್ಮ
ಗೋಕರ್ಣದ ಶ್ರೀ ನಂದಿನೀ ಮುದ್ರಣಾಲಯದಲ್ಲಿ
ಮುದ್ರಿಸಿದರು.
ಮತ್ತು
ತೊರ್ಕೆಯೊಳಗೆ ಕನ್ನಡಶಾಲೆಯ ಉಪಶಿಕ್ಷಕರಾದ
ವಿಠೋಬಾ ವೆಂಕನಾಯಕ ತೊರ್ಕೆ (ಚಂದಿರಾನಂದ)
ಇವರು ಪ್ರಕಟಿಸಿದರು.

ಬರೆದು ಬಂದ ಅಭಿಪ್ರಾಯಗಳ ಸಾರಾಂಶ.

೧ ಕವಿತಾ ಕಲಾಪ:— ಈ ಪುಸ್ತಕದಲ್ಲಿ ದೇವತಾಸ್ತುತಿ, ವರ್ಣನೆ, ನೀತಿಬೋಧೆ ಮೊದಲಾದ ವಿಷಯಗಳ ಕವಿತೆಗಳು ಶರ, ಭೋಗ, ಭಾಮಿನಿ, ವಾರ್ಧಕಷಟ್ಪದಿಗಳಲ್ಲಿಯೂ, ಕಂದರಾಗಗಳಲ್ಲಿಯೂ ರಚಿತವಾಗಿವೆ. ವಾರ್ಧಕವೇ ಹೆಚ್ಚಾಗಿರುವದು. ಭಾಷಾಶೈಲಿಯು ಸುಲಭವಾಗಿಯೂ ಲಲಿತವಾಗಿಯೂ ಇದೆ; ವರ್ಣನೆಗಳೆಲ್ಲವೂ ಅಂದವಾಗಿಯೂ ಭಾವಗರ್ಭಿತವಾಗಿಯೂ ಇವೆ; ವಿಷಯ ವಿವರಣೆಯೂ ಸಲಕ್ಷಣವಾಗಿದೆ............ ಇತ್ಯಾದಿ.

ಅಕ್ಟೋಬರ, ೧೯೨೯. } **ಕರ್ಣಾಟಕ ಸಾಹಿತ್ಯಪರಿಷತ್ಪತ್ರಿಕೆ.**

೨ ಕವಿತಾ ಕಲಾಪ:— ಕನ್ನಡದಲ್ಲಿ ಕಾದಂಬರಿ ಮೊದಲಾದ ಗ್ರಂಥಗಳನ್ನು ಬರೆಯುವವರೇ ಹೆಚ್ಚು. ವರ್ಣನೆಗಳನ್ನು ಪದ್ಯರೂಪದಿಂದ ಬರೆಯುವವರು ತೀರ ಕಡಿಮೆಯೆಂದರೂ ಸಲ್ಲುವದು. ಆದ್ದರಿಂದ ಮಿ. ತೊರ್ಕೆ ಇವರ ಪದ್ಯರೂಪ ವರ್ಣನೆಯ ಪ್ರಯತ್ನವು ತುಂಬಾ ಶ್ಲಾಘನೀಯವಾಗಿದೆ. ಕೆಲವೆಡೆಯಲ್ಲಿ ತಕ್ಕಂಥ ಶಬ್ದಗಳನ್ನು ಉಪಯೋಗಿಸುವ ಹುಟ್ಟುಕಲೆಯು ಇವರಿಗೆ ಸಾಧಿಸಿದಂತೆ ಕಾಣುತ್ತದೆ. ಸೂರ್ಯೋದಯ, ಸೂರ್ಯಾಸ್ತ, ಗೇರಸಪ್ಪೆಯ ತಡಸಲು ಮೊದಲಾದ ಸೃಷ್ಟಿಸೌಂದರ್ಯಗಳನ್ನು ಯಥಾರ್ಥ ಕಲ್ಪನೆಯಾಗುವಂತೆ ಭಾವಬೋಧಕವಾಗಿ ಬಣ್ಣಿಸಿದ್ದಾರೆ. ಒಟ್ಟಿನ ಮೇಲೆ ಕವಿತೆಯ ಸ್ವಾಭಾವಿಕ ಶೈಲಿಯು ಇವರ ಪದ್ಯಗಳಲ್ಲಿ ಒಡೆದು ತೋರುವಂತೆ ಇದೆ......ಇತ್ಯಾದಿ.

ನವಂಬರ, ೧೯೨೯. } ಸಂಪಾದಕ, **ಕನ್ನಡ ಪ್ರಾಥಮಿಕ ಶಿಕ್ಷಣ ಧಾರವಾಡ.**

ಈ ಪುಸ್ತಕವು ಮೆ॥ ಎ॥ ಇ॥ ಸಾಹೇಬ ದಕ್ಷಿಣಭಾಗರವರಿಂದ ಮಾಧ್ಯಮಿಕ ಶಾಲೆಗಳ ಸ್ಕಾಲರ್ಸ್ ಲಾಯಬ್ರರಿಗಳ ಉಪಯೋಗಕ್ಕಾಗಿ ಮಂಜೂರಾಗಿದೆ.

ಮುನ್ನುಡಿ.

॥ ಭಾಮಿನಿ ಷಟ್ಪದಿ. ॥

ಮೆರೆಯುತಿಹ ಕರ್ಣಾಟಮಾತೆಯ । ಚರಣಸೇವೆಯ ಮಾಳ್ಪ-
ದೆಂದೇ । ಬರೆದೆನೀ "**ಕವಿತಾಕಲಾಪ**" ವ ಭಕ್ತಿಭಾವದಲೀ ॥
ಹರುಷದಿಂದೀ ಕೃತಿಯನಂಗೀ । ಕರಿಸಿದೊಡೆ ವಿದ್ಯಾಭಿ-
ಮಾನಿಗ- । ೞರದೆ ಋಣಿಯಾಗಿರ್ಪೆನಾನನವರತ ಸಜ್ಜನರೇ ॥೧॥

ಅರಿಯೆನೈ ವ್ಯಾಕರಣ ಸೂತ್ರವ । ನೆರೆ ಮೆರೆಯುತಿಹ ಶಬ್ದ-
ರತ್ನಾ- । ಕರದ ನೆಲೆಯಂ ಚಾರುತರ ಛಂದಸ್ಸುಲಕ್ಷಣವ ॥
ಪರಮಪಾವನಮೂರ್ತಿ ದೇವನ । ಚರಣಕಾನತನಾಗಿ
ಬರೆದೆನು । ಕರುಣವಿರಿಸುತೆ ತಪ್ಪುಗಳ ನೀವ್ ತಿದ್ದುತೋದುವದು ॥೨॥

ಪೂರ್ವಕವಿಗಳ ಕೃತಿಯ ನೋಡುತೆ । ಸಾವಧಾನದೊಳಿದನು
ಬರೆದೆನು । ಕೋವಿದರೆ ಕುಂದುಗಳನೀಕ್ಷಿಸುತೆನ್ನ ನಿಂದಿಸದೆ ॥
ನೀವು ಹಂಸಕ್ಷೀರನ್ಯಾಯವ । ಭಾವಿಸುತಲೀ ಕೃತಿಯ
ಕೊಳ್ವುದು । ಗಾವಿಲನು ನಾನಿರಲು ಕವಿಗಳೆ! ಪೇಳ್ವುದಿನ್ನೇನು ॥೩॥

ಗಂಡುಹುಡುಗರ ಕನ್ನಡಶಾಲಾ
ತೊರ್ಕೆ. ತಾ. ೧-೧೦-೨೯

ವಿ. ವೆ. ತೊರ್ಕೆ.
(ಚಂದಿರಾನಂದ)

ವಿಷಯಾನುಕ್ರಮ.

॥ ಶ್ರೀ ಗಜಾನನಾಯ ನಮಃ ॥

ಕವಿತಾಕಲಾಪ.

೧ ಶ್ರೀಗಣಪತಿಸ್ತುತಿ.

॥ ಮತ್ತೇಭ ವಿಕ್ರೀಡಿತ ವೃತ್ತ ॥

ವರಪೂಜ್ಯಂ ಗುಣಸಾಗರಂ ಗಣವರಂ
ನಿತ್ಯಂ ಸುಖಂ ದಾಯಕಂ ।
ಹರಕಂದಂ ಸುರವಂದಿತಂ ಭವಹರಂ
ಲಂಬೋದರಂ ಸುಂದರಂ ।
ವರಪಾಶಾಂಕುಶಧಾರಕಂ ಗಜಮುಖಂ
ಭಕ್ತೌಘಸಂರಕ್ಷಕಂ ।
ವರದಂ ಮೂಷಕವಾಹನಂ ಕರುಣಿಪಂ
ವಿಘ್ನೇಶ್ವರಂ ಪಾವನಂ ॥೧॥

೨ ಬಾ! ಪ್ರಭಾಕರನೆ! ಬೇಗ ಬಾ!!

॥ ವಾರ್ಧಿಕ ಷಟ್ಪದಿ ॥

(೧) ಧರಣಿಯೊಳ್ ತುಂಬಿರ್ದ ಕತ್ತಲೆಯು ಓಡುತಿದೆ ।
ಮಿರುಗುತಿಹ ತಾರೆಗಳ್ ಕಂದುತಿವೆ ಗಗನದೊಳು ।
ಸರಸರನೆ ಸೇರುತಿವೆ ಪುಲಿ-ಕರಡಿಗಳು ತಮ್ಮ ಗಂಹರವ ಭೀತಿಯಿಂದ ॥
ಕೊರಗುತಿದೆ ಕುವಲಿನಿಯು ನಿದ್ರಾಂಗನೆಯು ತಾನು ।
ಚರಿಸುತಿದೆ ದುಗುಡದಿಂದಡಗಿರ್ಪುದೆಲ್ಲಿ ನೀಂ ।
ಕರುಣಾವನಧಿ ತೋರಿಸೈ ಮುಖವ ಬಾರೈ! ಪ್ರಭಾಕರನೆ! ಬಾ ಬೇಗದಿಂ ॥

(೨) ಕರೆಯುತಿವೆ ಜನರನ್ನು ಸ್ವಾಗತಕೆ ಕೋಳಿಗಳು ।
ತರತರದ ಪುಷ್ಪಮಾಲಿಕೆಯನ್ನು ತರು-ಲತೆಗ- । ಳಿರದೆ
ಧರಿಸಿಹವು ಪವಮಾನತಾಂ ಗಂಧವಂ ವಹಿಸಿಹನು ಮುನಿಪರುಗಳು ॥
ವರಮಂತ್ರಘೋಷಮಂ ಗೆಯ್ಯುವರು ಹರುಷದಿಂ ।
ತರುಣಿಯರು ಜಲಪೂರ್ಣ ಕಲಶಮಂ ಪಿಡಿದಿಹರು ।
ಸರಸಿಜೆಯು ಮೊಗವೆತ್ತಿ ನಗುತಿಹಳು ಬಾರೈ ಪ್ರಭಾಕರನೆ! ಬೇಗದಿಂ ॥

(೩) ತುರುಮಂಧಿ ಚಾಮರವ ಬೀಸುವವು ಭೃಂಗಗಳು ।
ಸರಸದಿಂ ಪಾಡುವವು ನವಿಲುಗಳು ನರ್ತಿಪವು ।
ವರರತ್ನಖಚಿತವಾಗಿಹ ಸಿಂಹವಿಷ್ಟರವ ನಿಟ್ಟಿಹಳು ಮೂಡುವೆಣ್ಣು ॥
ವರರಂಗವಲ್ಲಿಯ ವಸುಂಧರೆಯು ಬರೆದಿಹಳು ।
ತರುಣಿಯರು ಪಾಲ್ಬೆಣ್ಣೆಗಳ ಪಿಡಿದು ನಿಂತಿಹರು ।
ಅರುಣತಾಂ ರಥಕೆ ತುರಗಂಗಳಂ ಪೂಡಿಹನು ಬಾರೈ ಪ್ರಭಾಕರನೆ! ಬಾ ॥

॥ ಶ್ರೀ ಗಜಾನನಾಯ ನಮಃ ॥

ಕವಿತಾಕಲಾಪ.

೧ ಶ್ರೀಗಣಪತಿಸ್ತುತಿ.

॥ ಮತ್ತೇಭ ವಿಕ್ರೀಡಿತ ವೃತ್ತ ॥

ವರಪೂಜ್ಯಂ ಗುಣಸಾಗರಂ ಗಣವರಂ
ನಿತ್ಯಂ ಸುಖಂ ದಾಯಕಂ ।
ಹರಕಂದಂ ಸುರವಂದಿತಂ ಭವಹರಂ
ಲಂಬೋದರಂ ಸುಂದರಂ ।
ವರಪಾಶಾಂಕುಶಧಾರಕಂ ಗಜಮುಖಂ
ಭಕ್ತಾಘಸಂರಕ್ಷಕಂ ।
ವರದಂ ಮೂಷಕವಾಹನಂ ಕರುಣಿಪಂ
ವಿಘ್ನೇಶ್ವರಂ ಪಾವನಂ ॥೧॥

೨ ಬಾ! ಪ್ರಭಾಕರನೆ! ಬೇಗ ಬಾ!!

॥ ವಾರ್ಧಿಕ ಷಟ್ಪದಿ ॥

(೧) ಧರಣಿಯೊಳ್ ತುಂಬಿರ್ದ ಕತ್ತಲೆಯು ಓಡುತಿದೆ ।
ಮಿರುಗುತಿಹ ತಾರೆಗಳ್ ಕಂದುತಿವೆ ಗಗನದೊಳು ।
ಸರಸರನೆ ಸೇರುತಿವೆ ಪುಲಿ-ಕರಡಿಗಳು ತಮ್ಮ ಗಂಹರವ ಭೀತಿಯಿಂದ ॥
ಕೊರಗುತಿದೆ ಕುವಲಿನಿಯು ನಿದ್ರಾಂಗನೆಯು ತಾನು ।
ಚರಿಸುತಿದೆ ದುಗುಡದಿಂದಡಗಿರ್ಪುದೆಲ್ಲಿ ನೀಂ ।
ಕರುಣಾವನಧಿ ತೋರಿಸೈ ಮುಖವ ಬಾರೈ! ಪ್ರಭಾಕರನೆ! ಬಾ ಬೇಗದಿಂ ॥

(೨) ಕರೆಯುತಿವೆ ಜನರನ್ನು ಸ್ವಾಗತಕೆ ಕೋಳಿಗಳು ।
ತರತರದ ಪುಷ್ಪಮಾಲಿಕೆಯನ್ನು ತರು-ಲತೆಗ- । ಳಿರದೆ
ಧರಿಸಿಹವು ಪವಮಾನತಾಂ ಗಂಧವಂ ವಹಿಸಿಹನು ಮುನಿಪರುಗಳು ॥
ವರಮಂತ್ರಘೋಷಮಂ ಗೆಯ್ಯುವರು ಹರುಷದಿಂ ।
ತರುಣಿಯರು ಜಲಪೂರ್ಣ ಕಲಶಮಂ ಪಿಡಿದಿಹರು ।
ಸರಸಿಜೆಯು ಮೊಗವೆತ್ತಿ ನಗುತಿಹಳು ಬಾರೈ ಪ್ರಭಾಕರನೆ! ಬೇಗದಿಂ ॥

(೩) ತುರುಮಂದಿ ಚಾಮರವ ಬೀಸುವವು ಭೃಂಗಗಳು ।
ಸರಸದಿಂ ಪಾಡುವವು ನವಿಲುಗಳು ನರ್ತಿಪವು ।
ವರರತ್ನಖಚಿತವಾಗಿಹ ಸಿಂಹವಿಷ್ಟರವ ನಿಟ್ಟಿಹಳು ಮೂಡುವೆಣ್ಣು ॥
ವರರಂಗವಲ್ಲಿಯ ವಸುಂಧರೆಯು ಬರೆದಿಹಳು ।
ತರುಣಿಯರು ಪಾಲ್ಬೆಣ್ಣೆಗಳ ಪಿಡಿದು ನಿಂತಿಹರು ।
ಅರುಣತಾಂ ರಥಕೆ ತುರಗಂಗಳಂ ಪೂಡಿಹನು ಬಾರೈ ಪ್ರಭಾಕರನೆ! ಬಾ ॥

೩ ಶಂಖಪ್ರಲಾಪ.

॥ ರಾಗ ಕಾಂಬೋದಿ, ಝಂಪೆ ತಾಳ ॥

ಒಡಹುಟ್ಟಿದವರ ಸಿರಿಯಿಂದಲೇನು? ।
ಪಡೆದ ವಿಧಿಯಂ ಬಿಡಿಸುವವರಿಲ್ಲ ಮನುಜಾ ॥ ಪಲ್ಲ ॥
ಸಿರಿ ತಾನು ಹರಿಯುರಸಿಯಾಗಿ ಮೆರೆಯುತ್ತಿಹಳು । ಪರಮಭಕ್ತರ.
ವಳ್ಗೆ ಜನರಿಲ್ಲರು ॥ ವರ ಕೌಸ್ತುಭಾಭರಣ ವೈಕುಂಠ ಕಂಠದೊಳು ।
ಹರುಷದಿಂದಿರುತಿಹುದು ಪೇಳ್ವದೇನೀಗ ॥ ೧ ॥

ಚಂದ್ರಮನು ಶೂಲಧಾರಿಯ ಲಲಾಟದೊಳಿಹನು । ಇಂದ್ರನಂ
ಸೇರಿಹುದು ಪಾರಿಜಾತಾ ॥ ವಂದ್ಯವಾಗಿಹುದು ಕಲ್ಪದ್ರುಮಂ
ಧರೆಯೊಳಗೆ । ಪೊಂದಿತ್ತೆ ಹಾಲಾಹಲಂ ಹರನ ಕೊರಲ ॥ ೨ ॥

ಹರಿ-ಹರ-ವಿರಿಂಚಿಗಳು ಪರಮಾಪ್ತರಾದೊಡೇಂ । ವರ ಕುಬೇರಂ
ಧನಾಧೀಶಸಿರಲೇಂ ॥ ತಿರುಕುಳಿಯ ಕರದೊಳಗೆ ಸೇರಿ ನಾಂ
ಮನೆಮನೆಯ । ತಿರಿದುಂಬೆನಯ್ಯ ಕೂಗುತೆ ನಿತ್ಯ ನಿತ್ಯ ॥ ೩ ॥

೪ ವಿಷ್ಣುವೋ? ವಿಷ್ಣುಪದವೋ!

॥ ವಾರ್ಧಿಕ ಷಟ್ಪದಿ. ॥

(೧) ನೀಲಮೇಘಶ್ಯಾಮದಿಂದೆ ರಾರಾಜಿಸುವೆ ।
ಬಾಲನಹ ಧ್ರುವನಿಂಗಚಲಪದವನಿತ್ತು ಸಲೆ ।
ಪಾಲಿಸುವೆ ಖಗ ನಿನ್ನ ಮಂದಿರದೆ ನೆಲಸಿಹನು ಸರ್ವದಾ ನೀನನಂತ ॥
ಬಾಲೆಗಂಗೆಯ ಜನಕನೆಂದು ಪೇಳ್ವರು ನಿನಗೆ ।
ಲೀಲೆಯಿಂದಾಡುತಿದೆ ಭುವನ ನಿನ್ನೊಡಲಲ್ಲಿ ।
ಪೇಳು ನೀಂ ವಿಷ್ಣುವೋ ವಿಷ್ಣುಪದವೋ ತಿಳಿಯಲಾರೆನಾಂ ನೀನೆ ಧನ್ಯ ॥

೫ ಪಂಜರದ ಗಿಣಿಯ ವಾಣಿ.

॥ ಭೋಗ ಷಟ್ಪದಿ. ॥

ಪಕ್ಕಿಗಳಿರ! ಬಳಗದೊಡನೆ । ಚಿಕ್ಕಮರಿಗಳೊಡನೆ ನೀವು । ಕಕ್ಕುಲಾ-
ತೆಯಿಂದ ಹಣ್ಣು-ಹಂಪಲಂಗಳ ॥ ಮುಕ್ಕಿ ವನದೊಳಿರಲು ದುರ್ಮ ।
ನಕ್ಕೆ ತಕ್ಕ ತೆರದೊಳೆನ್ನ- । ನೆಕ್ಕಸಕ್ಕನೆಂಬುವೆಕ್ಕಸವದು ತಕ್ಕುದೇ ॥೧॥

ಕಳ್ಳನಲ್ಲ ಪಂಜರದೊಳು । ಖುಲ್ಲನಂತೆ ನಿಲ್ಲಲಿಲ್ಲ । ಬಲ್ಲಜನರ ಸಂಗ
ದಲ್ಲಿ ಮಾನಪೊಂದುತ ॥ ಒಳ್ಳೆ ಮಾತ ಕಲಿತ ಜಾಣ । ನಲ್ಲವೇನು?
ನಿಮಗೆ ದೊರೆವು- । ದೆಲ್ಲಿ ನನ್ನ ಸುಖವು ಗರ್ವವೇಕೆ ಮೂಢರೇ ॥೨॥

೬ ಕಡವರದೊಡನುಡಿ.

॥ ವಾರ್ಧಿಕ ಷಟ್ಪದಿ. ॥

(೧) ಪಿಡಿಪಿಡಿದು ಸುಡುಸುಡುತೆ ಬಿಡಬಿಡದೆ ಬಡಿಬಡಿಯೆ ।
ಮಡಿಮಡಿದು ನಡೆನೋಡಿ ಸಿಡಿಸಿಡಿದು ಕಿಡಿಕಿಡಿಯೆ ।
ಕಡಿಕಡಿದು ಕೆಡಿಕೆಡಿಸಿ ಕಡೆಗೂಡೆ ನಾಂ ಕಡುಹುಸಡಗರವ ನೀಡೆ ನೀಡೆ ॥
ಕೊಡುಕೊಡೆಂದಡಿಗಡಿಗೆ ಹುಡುಗರಡಿಪಿಡಿಯೆ ತೊಡ. ।
ತೊಡಿಸಿ ಮುಂಡಾಡಿ ಕೊಂಡಾಡಿ ಗಾಡಿಯೊಳಾಡಿ ।
ಪಡೆವರನ್ನೊಡಗೂಡಿ ಕಡುಸುಖವಹುಡುಗರಂಪಡೆದವರುಪೊಡವಿಯೊಳಗೆ॥

೭ ಹೊಲೆಯ ತಾಂ ಹೊಲೆಯನಲ್ಲ.

॥ ವಾರ್ಧಿಕ ಷಟ್ಪದಿ. ॥

(೧) ಪರನಾರಿಯರ ಮನಕೆ ತಂದವಂ ಬೆರೆದವಂ ।
ಪರನಿಂದೆಯಂ ಮಾಳ್ಪ ಕೇಳ್ವ ಮಾನವನವಂ ।
ಪರಧನವ ಕದ್ದವಂ ಕಳಲು ಪೇಳ್ದಂ ಸಟೆಯ ನುಡಿವವಂ ಶೀಘ್ರ ಕೋಪೀ ॥

ಹೆರವರಪರಾಧವಂ ಕ್ಷಮಿಸದಂ ಗರ್ವಿಪಂ ।
ದುರುಳರಾಶ್ರಯದೊಳಿಪ್ಪಂ ಪರಾನ್ನಾಪೇಕ್ಷಿ । ಪರರಿಗುಪಕಾರ.
ಮಂ ಮಾಡದಂ ಕಡು ಹೊಲೆಯ ಹೊಲೆಯ ತಾಂ ಹೊಲೆಯನಲ್ಲ ॥

೮ ಅಬಲೆಯರ್ ಪ್ರಬಲೆಯರ್ ಕಣಾ!!

॥ ವಾರ್ಧಿಕ ಷಟ್ಪದಿ ॥

(೧) ಅಂಧನೃಪಕಂದ ತಾಂ ಗಂಧರ್ವಬಂಧನದೆ ।
ನೊಂದಿರಲ್ ದ್ರುಪದನಂದನೆ ಬಿಡಿಸಲಿಲ್ಲವೇಂ । ಇಂದ್ರ-
ನಂದನನ ಚಿತ್ರಾಂಗದೆಯು, ಗಾಧಿಜನ ಮೇನಿಕೆಯು ಬೆರೆದುದಲ್ತೇಂ ॥
ಕಂದರಂ ವನಕಟ್ಟಲಿಲ್ಲವೇಂ ದಶರಥಂ । ಸುಂದರಿಯ
ನುಡಿಗೇಳ್ದು, ಮಡದಿಯರನೊಡಬಡಿಸೆ । ಕಂದರಾದರ್
ತ್ರಿಮೂರ್ತಿಗಳಬಲೆಯರ್ ಪ್ರಬಲೆಯರ್ ಕಣಾ! ವಿಶ್ವದೊಳಗೆ ॥

೯ ಗಂಗಾಪ್ರಲಾಪ.

॥ ವಾರ್ಧಿಕ ಷಟ್ಪದಿ. ॥

(೧) ಪರಮಾತ್ಮನೇ ಪಿತಂ ಸುಖಸಿಲಯ ಸ್ವರ್ಗಮಂ ।
ತೊರೆದು ನಾಂ ಪಾರ್ವತೀವಲ್ಲಭನ ಮೆರೆಯುತಿಹ ।
ಶಿಗಪಲ್ಲಿ ನೆಲೆಸಿರಲ್ ಹಿಮಗಿರಿಯ ಮೇಲುರುಳಿ ಕಷ್ಟದಿಂ ಚರಿಸುತ್ತಲಿ ॥

ಧರಣಿಗೈತಂದು ಮುಂದತ್ವಮಂ ತಾಳುತ್ತೆ ।
ಶರಧಿಯಂ ಸೇರ್ದೆನ್ನೆ ಬಳಿಕೆನಗೆ ಪಾತಾಳ । ದಿರ-
ವಾಯ್ತು ಸೊಗಮಿಲ್ಲದಂತಾಯ್ತು ಸ್ಥಾನಮಂ ತೊರೆದರಿಂ ಕೆಟ್ಟೆನವ್ವಾ ॥

೧೦ ಗರ್ವಾಪಹಾರ.

॥ ಭಾಮಿನಿ ಷಟ್ಪದಿ. ॥

ಒಂದು ದಿನ ಕಮಲಜೆಯು ಗೌರಿಯು । ಇಂದುಮುಖಿ ಸರಸತಿಯು
ನಾರೀ- । ವೃಂದದೊಳು ತನುಗಾರು ಪಾಸಟಿ! ಹದಿಬದೆಯರಿಹೆವು ॥
ಎಂದು ಗರುವದೊಳಿರಲು ತಾನ್ಕೈ- । ತಂದನಲ್ಲಿಗೆ ಮುನಿಯು
ನಾರದ । ನಿಂದುವದನೆಯರವಗೆ ಮನ್ನಣೆಯಿತ್ತು ಮೋದದಲಿ ॥೧॥

ಹರುಷವೀವುದು ನಿಮ್ಮದರುಶನ । ಪರಮಮುನಿಗಳೆ!
ಬಂದಿರೆಲ್ಲಿಂ- । ದಿರದೆ ಬೇಡ್ವೆವು ಕಂಡ ಸುದ್ದಿಯ ಪೇಳಬೇಕೆನಲು ॥
ಚರಿಸಿ ಭೂಲೋಕದಲಿ ಕಂಡೆನು । ಪರಮಶೀಲಳು ಅತ್ರಿಕಾಂತೆಯು ।
ತರುಣಿ ಕುಲದೊಳ್ ಮಿಗಿಲು ಸುಡು ಮಿಕ್ಕಾದತರುಣಿಯರಾ ॥೨॥

ಎನಲು ಮನದೊಳ್ ಸಹಿಸಲಾರದೆ । ವನಿತೆಯರ್ ನಿಜಧವರೊಳ-
ತ್ರೀ- । ಮುನಿಯ ಮಡದಿಯ ಶೀಲವಮಂ ನೀವ್ ಪೋಗಿ ಕೆಡಿಸುವದು ॥
ಎನಲು ಹರಿ-ಹರ-ಬ್ರಹ್ಮರೆಂದರ್ । ಮನದಸೂಯೆಯ ತೊರೆದು
ಬಾಳಿರಿ । ಮನವು ಮೆಚ್ಚದು ಹೀನಕಾರ್ಯಕೆ ಪೂಜ್ಯಳನಸೂಯಾ! ॥೩॥

ಆಗದಾಗದು ರಾಗವಿರ್ಪೊಡೆ । ಪೋಗಿ ಪೋಗಿರಿ ಪೋಗದಿರ್ಪೊ-
ಡೆ । ಈಗಲೇ ನಾವ್ ತೊರೆದು ನಿಮ್ಮನು ಬಾಳ್ವೆವೆಂದೆನಲು ॥
ಸಾಗರ ಶಯನ! ನಾಗಭೂಷಣ! । ನಾಗಶಯನಜರೊಂದುಗೂ
ಡುತೆ । ಸಾಗಿ ಬಂದರು ವಿಪ್ರರೂಪಗಳಿಂದ ಭೂತಳಕೆ ॥ ೪ ॥

ವಿಮಲ ಮೂರ್ತಿಗಳತ್ರಿಯಿಲ್ಲದ । ಸಮಯದೊಳಗಾಗಮಿಸಲವ-
ನಾ । ಶ್ರಮಕೆ ಬಿಸಿಲಿಂ ಪಸಿವಿನಿಂದಂ ಬಳಲಿದಹರಂತೆ ॥ ವಿಮ-
ಲಮುಖಿಯನಸೂಯೆ ನಯದಿಂ । ನಿಮಗೆ ಕುಶಲವೆ ಹರುಷವಾ
ದುದು । ಸುಮನದಿಂದಂ ಬನ್ನಿರೆಂದಳ್ ಮಿಂದು ಭೋಜನಕೆ ॥೫॥

ಮಿಂದು ಮಡಿಯಂ ಧರಿಸಿಯುಣಲೈ- । ತಂದತಿಥಿಚಯವನ್ನು
ಕಂಡಾ- । ನಂದದಿಂದಲಿ ಪೋಗಿ ಬಡಿಸಲ್ ಧಿಕ್ಕರಿಸಲವರು ॥
ಎಂದುವಿಲ್ಲದ ಪರಿಯ ಪರಿಕಿಸಿ । ನೊಂದು ಬೇಡಿದಳವರ ಮೆ
ತ್ರೇ- । ನೆಂದುಸುರೆ ನೀಂ ನಗ್ನದಿಂದಿಕ್ಕೆಂದರತಿಥಿಗಳು ॥ ೬ ॥

ಹೀನನುಡಿಯಂ ಕೇಳಿ ಮಾನುನಿ- । ಯೇನ ಮಾಡಲಿ? ಮನ್ನಿಸ-
ದೊಡಾಂ । ಹೀನಳೆಂಬರ್ ಪೋಗೆ ಬಡಿಸಲು ಮಾನವಿರದೆಂದು ॥
ತಾನೆ ಯೋಚಿಸಿ ದೀನಳೆನ್ನಯ । ಮಾನಕಾಯುವದೆಂದು ಪತಿ-
ಯಂ । ಜ್ಞಾನಿಸುತ್ತ ಕಮಂಡಲೋದಕವನ್ನು ಸಿಂಪಡಿಸೆ ॥೭॥

ಶಿಶುಗಳಾದರ್ ಕಪಟವಿಪ್ರರ್ । ಪಸಿವಿನಿಂದತಿನೊಂದುಕೊಂಡಿರೆ ।
ಒಸೆದು ನಗ್ನದಿ ಬಂದು ಮೊಲೆಯುಣಿಸಿದಳು ಅನಸೂಯೆ ॥ ಹಸುಳೆ
ರನು ಬಲು ಕಕ್ಕುಲತೆಯಿಂ । ಕುಸುಮನೇತ್ರೆಯು ಮುದ್ದಿಸುತ್ತಂ ।
ಎಸೆವ ತೊಟ್ಟಿಲೊಳಿಟ್ಟು ಜೋಗುಳಪಾಡಿ ತೂಗಿದಳು ॥೮॥

ಅತ್ತ ಸರಸತಿ, ಗಿರಿಜೆ, ಸಿರಿಯರ್ । ಚಿತ್ತವಲ್ಲಭರೆಮ್ಮನುಳಿದಿ- ।

ನ್ನೆತ್ತ ಪೋದರೊ? ಪೋಗಿ ಕಾಲವು ಬಹಳವಾಯ್ತೆಂದು ॥ ಮತ್ತೆ
ನಾರದನನ್ನು ಕೇಳಲು । ಅತ್ರಿ ಮುನಿಯಾಶ್ರಮದೆ ನಿಮ್ಮಯ ।
ಚಿತ್ತವಲ್ಲಭರಿಹರು ಬಾಲಕರಾಗಿ ಸಂತಸದೆ ॥ ೯ ॥

ಎಂದೆನಲು ನಾವಂದುತಪ್ಪಿದೆ । ಇಂದು ಗರ್ವವ ಬಿಟ್ಟು ಬೇಡ್ವೆವು ।
ಮಂದಮತಿಗಳು ನಾವು ಪತಿಗಳ ಕೊಡಿಸಬೇಕೆನಲು ॥ ನೊಂದು
ಮನದೊಳು ಬೆಂದು ಬಾಯ್ಬಿಡು । ಇಂದು ಮುಖಿಯರ ಮೇಳ
ದೊಡನ್ನೈ । ತಂದು ನಾರದನೆಲ್ಲ ಸುದ್ದಿಯನತ್ರಿಯೊಡನೆಂದಾ ॥ ೧೦ ॥

ಕರವಮುಗಿವೆವು ಪರಮಶೀಲಳೆ! । ಕರುಣತೋರಿಸು ಸರಳಹೃದ
ಯಳೆ! । ಅರಿಯದಾದೆವು ನಿನ್ನ ಮಹಿಮೆಯನೆಂದು ಮೊರೆಯಿಡುವ ॥
ಸಿರಿಯ ಗೌರಿಯ ಶಾರದಾಂಬೆಯ । ಪರಮಪಾವನೆಯತ್ರಿಕಾಂತೆ
ಯು । ಕರೆದು ಮನ್ನಿಸುತವರ ಪತಿಗಳ ನೀಯಲಾಬಳಿಕ ॥ ೧೧ ॥

ಸಿರಿಮನೋಹರ-ಕಂಬುಕಂಧರ । ಸರಸಿಜೋದ್ಭವರುಗಳು ಹರುಷ
ದಿ । ಮೆರೆವ ತಮ್ಮಯ ನೈಜರೂಪವ ಧರಿಸಿ ಅನಸೂಯಾ ॥ ಧರಣಿ
ಯೊಳು ವರತರುಣಿಯಂದದೆ । ತರುಣಿ ಕುಲದೊಳ್ ಅತ್ರಿಮುನಿ-
ಸತಿ । ಮೆರೆವಳೆಂಬುದನರಿತೆವ್ವೆ ವರವನ್ನು ಬೇಡೆಂದರ್ ॥ ೧೨ ॥

ಸೃಷ್ಟಿ-ಸ್ಥಿತಿ-ಲಯ ಮೂಲರಾಗಿಹ । ಶಿಷ್ಟಮೂರ್ತಿಗಳನ್ನು ನೋ-
ಡುತ । ತುಷ್ಟಳಾಗುತ್ತ, ಪಾದಕೆರಗುತ, ನಗುತಲನಸೂಯಾ ॥
ಹುಟ್ಟುವದು ನೀವೆಲ್ಲರೊಂದೇ । ಹುಟ್ಟನಿಂದೆನ್ನುದರದೊಳ್ ಸ-
ತ್- । ಪುತ್ರನೋರ್ವನನೀವುದೆಂದಳು ವರವ ಬೇಡಿದಳು ॥ ೧೩ ॥

ವರವ ಕರುಣಿಸಿದಂತೆ ತರುಣಿಗೆ । ವರ ಕುಮಾರಕನೋರ್ವನುದ-
ಯಿಸೆ । ಕರೆದರಾತಂಗೊಲಿದು ದತ್ತಾತ್ರೇಯನೆಂದೆಲ್ಲರ್ ॥ ತರ-

ಳೆಯುರೆ! ಮುನಿಸತಿಯ ಚರಣಕೆ । ನಿರುತಮೇಕೀಭಾವದಿಂದಲಿ ।
ಶಿರವ ಚಾಚಿರಿ ಪತಿಯ ಭಜಿಸಿರಿ ನಿಮಗೆ ಮಂಗಲವು ॥ ೧೪ ॥

೧೧ ಸ್ಥಾನಭ್ರಷ್ಟನಾಗಬೇಡ.

॥ ಶರ ಷಟ್ಪದಿ. ॥

ನೀರೊಳ್ ಸ್ಥಿರಮಿರೆ । ಸಾರಸ ಕುಸುಮಂ । ತೋ-
ರಲ್ ದಿನಮಣಿ ಕಿರಣಗಳ ॥ ಭೂರಿ ಸುಗಂಧವ । ಬೀ
ರುತೆಬಾರೆನೆ । ಆರಡಿ ಕುಲ ಕಿತ್ತುದು ಮಧುವಾ ॥ ೧ ॥

ನೀರಂ ತೊರೆದುಂ । ಧಾರುಣಿಗೈತರೆ । ತೋರಲ್
ದಿನಮಣಿ ಕಿರಣಗಳಾ ॥ ವೋರೆಯ ಕೊರಗಿಸೆ ।
ಸೈರಿಸದುರಿಯಂ । ಪಾರಿದವಾರಡಿ ಬೇರೆಡೆಗೆ ॥ ೨ ॥

೧೨ ಸೂರ್ಯಾಸ್ತಬಿಂಬ.

॥ ವಾರ್ಧಿಕ ಷಟ್ಪದಿ. ॥

(೧) ಅಸುರಸಂಹಾರದಿಂ ರಕ್ತಲೇಪಿತಮಾದ ।
ಬಿಸಜನಾಭನ ಕರದ ಚಕ್ರವೋ! ಭಾವಿಸಲ್ । ಮಿಸುಪ
ಚಂದಿರವಟ್ಟೊ! ಕಾಂತನನಿದಿರ್ಗೊಂಬ ಪಶ್ಚಿಮಾಂಗನೆಯ ಪಣೆಯ ॥
ಬೆಸನದಿಂ ಪ್ರಾಗಂಗನೆಯು ಬಿಸುಟ ರಾಗಟಿಯೊ! ।
ಕುಸುಮಾಂಬನರಸಿಯಾರತಿಯ ಪೊಂದಟ್ಟೆಯೋ! ।
ಎಸೆವ ರತ್ನಾಕರನ ಮುಕುಟವೆಂಬಂತೆ ಭಾಸಿಪುದು ಸೂರ್ಯಾಸ್ತಬಿಂಬ ॥

೧೩ ಪರನಾರೀಬಯಕೆಯು ನರಕಕ್ಕೆ ದಾರಿಯು.

॥ ವಾರ್ಧಿಕ ಷಟ್ಪದಿ. ॥

(೧) ಸೀತೆಯಂ ಕದ್ದೊಯ್ದು ಲಂಕಾಧಿಪತಿಯ ಕುಲ ।
ಪಾತವಾದುದು ಕೃಷ್ಣೆಯಂ ಬಯಸಿ ಕೀಚಕಂ । ಯಾತನೆಯ
ಪೊಂದುತಸುವನ್ನು ತೊರೆದಂ ಗೌತಮುನ ಪತ್ನಿಯಂಬೆರೆಯಲು ॥
ಮಾತಂಗವಾಹನಂ ಛಿದ್ರಮಯನಾದನೈ ।
ಭ್ರಾತೃದಾರಾಪಹರಣಂ ಗೆಯ್ದು ವಾಲಿ ತಾಂ ।
ಪಾತಕಕೆ ಬಿದ್ದನೈ ಬಾಣದಿಂ ಪರನಾರಿಯರ ನೋಡೆ ಕೇಡಾಗದೇ ॥

೧೪ ದಾತನಾದ ಕರ್ಣ.

॥ ವಾರ್ಧಿಕ ಷಟ್ಪದಿ. ॥

(೧) ಇನನಣುಗ ಕರ್ಣ ತಾಂ ಬಾಣಗಳ ಕೈಕೊಂಡು ।
ವನವನಾಂತರಗಳಲಿ ಸಂಚರಿಸಿ ಬೇಂಟೆಯೊಳ್ । ಮನಸಿ
ಸೊಳ್ಕರಗುವನು ಹರಿಯ ಬಾಯೊಳು ಬಿದ್ದ ಹರಿಣಗಳ ನೋಡಿ ಬಿಡುಕಿ ॥
ಅನುತಾಪದೊಳು ಸಿಲ್ಕಿ ಬಳಲುತಿಹ ಜೀವಿಗಳ ।
ತನುವನುಳಿಸದೆ ತನ್ನ ಮಂದಿರಕೆ ತೆರಳನೈ ।
ಜನಪದದೊಳಾರಿಲ್ಲ ಕರ್ಣಂಗೆ ಜೋಡೆನಿಪ ಜೀವದಾತಾರರ್ಕಳು ॥

(೨) ಕರಿಪುರದ ನರಪತಿಯ ಸಹಜಾತನೊಂದು ದಿನ ।
ಗಿರಿಗಂಹರದೆ ಕಾಡಮೃಗಗಳನು ಸಂಹರಿಸೆ । ಚರಿಸುತಿರೆ
ಕಾಡಾನೆಯೊಂದು ಕಡುಮುಳಿದು ದುಡುಕುತ್ತ ಬೆನ್ನಟ್ಟಿಬರಲು ॥
ಹರಹರಾ! ಕಾಡಾನೆಯೆನ್ನೊಡಲನೊಡೆಯುವದು ।
ಧರೆಯೊಳಗೆ ಕಾಯ್ವರಾರಿಲ್ಲವೆನುತವ ನೋಡು ।
ತಿರಲದಂ ಕಂಡು ಕರ್ಣಂ ಬಾಣದಿಂದೆಚ್ಚು ಕೆಡಹಿದನು ಭೂತಳಕ್ಕೆ ॥

(೩) ದಿನದಿನಕೆ ಸೂರ್ಯತನಯನ ಮನೆಯ ಬಾಗಿಲ್ಗೆ ।
ಜನನಿಕರ ಬರುತಿಹುದು ಕೊಡುಕೊಡೆಮಗೆಂದು ಧನ- ।
ಕನಕ-ರತ್ನಾಭರಣ-ವಸ್ತ್ರ-ಧಾನ್ಯಂಗಳಂ ಕೊಡುವನೈ ಬೇಡಿದರ್ಗೆ ॥
ಜನಪದದೆ ಪೆಸರಾಯ್ತು ಕೊಡುಗೈಯ ದೊರೆಯೆಂದು ।
ಧನದಿಂದ ಬರಿದಾಯ್ತು ಅಂಗರಾಜ್ಯದ ಕೋಶ ।
ಘನದಾನದಿಂ ತುಂಬಿ ತುಳುಕಿತ್ತೈ ವಿಖ್ಯಾತ ದಾತ ಭೂನಾಥನಿಂದ ॥

(೪) ಒಂದು ದಿನ ವೈರಿಯೋರ್ವನು ಕರ್ಣನಿದ್ದೆಡೆಗೆ ।
ಬಂದು ನಿನ್ನಯ ಶಸ್ತ್ರಮೊಂದನೆನಗೀಯೆನಲು ।
ಮುಂದೆ ಮಲೆತೈತಪ್ಪ ವೈರಿಗಳ ಕೊಲ್ವ ಬಲವುಳ್ಳ ಶಸ್ತ್ರವನೀಯೆನು ॥
ಎಂದು ಪೇಳ್ವನೆ! ತಾನು ನಿಶ್ಯಸ್ತ್ರನಪ್ಪೊಡಂ ।
ಮುಂದೆ ತಾಪೀದಾನಬಲದಿಂದೆ ವೈರಿಗಳ । ಕೊಂದಪೆಂ
ಬಂದವನ ಪಿಂದೆ ಕಳುಹುವದುಚಿತಮಲ್ಲೆಂದು ಕೊಟ್ಟನವಗೆ ॥

(೫) ತನ್ನ ಪುತ್ರನೆ ಧಾತ್ರಿಯೊಳು ವೀರಯುತನಾಗಿ ।
ಬನ್ನಗಳ ನೀಗಿ ಸಂತಸದಿಂದ ಬಾಳ್ವುದೈ ।
ಇನ್ನೇನ ಮಾಳ್ಪುದೈ ಶಸ್ತ್ರಾಸ್ತ್ರವಿದ್ಯೆಯೊಳು ಜಾಣನೈ ಕರ್ಣನೆಂದು ॥
ತನ್ನ ರೂಪವ ಮರೆಸಿ ದೇವೇಂದ್ರ ಕಪಟದಿಂ ।
ನಿನ್ನ ಕೀರ್ತಿಯ ಕೇಳಿ ಬಂದೆನೈ ಕರ್ಣನೇ ।
ನಿನ್ನೀ ಕವಚ ಕುಂಡಲಂಗಳಂ ಬೇಡುವೆಂ ನೀಡೆನಲು ಕೊಡದುಳಿದನೇ ॥

(೬) ಅತಿಥಿಯೋರ್ವನು ಬಂದು ಭಾಸ್ಕರಜನೇ ನಿನ್ನ ।
ಸುತನ ಕತ್ತನು ಕತ್ತರಿಸಿ ಯೆನಗೆ ನೀನಿಂದು । ಅತಿಮಧುರ
ಶಾಕಮಂ ಬಡಿಸಿದೊಡೆ ಸಂತಸದಿ ಪೋಪೆನಿಂತೆನಲು ಬಳಿಕ ॥
ಸತಿಯೊಡನೆ ಕಳವಳಿಸದಿರು ಸುತನ ಕೊಲ್ಲುವೆಂ ।
ಖತಿಯ ತೋರಲುಬೇಡ ನೀನೆಂದು ತಕ್ಷಣಕೆ । ಅತಿಥಿಯುಂ
ಸಂತೈಸಿ ಕಳುಹಿದನು ವೃಷಕೇತು ಜನಕನಂಪೋಲ್ವರುಂಟೇ ॥

(೭) ಕುರುಸೇನೆಗಧಿಪ ತಾನೆನಿಸಿ ರವಿಸುಕುಮಾರ ।
ಕುರುಕ್ಷೇತ್ರದೊಳ್ ಕಾದುತಿರೆ ಧರ್ಮಸಂಜಾತ । ಸೆರೆಯೊ-
ಳಗೆ ಸಿಲ್ಕಿರಲು ಪವಮಾನ ಸುತ-ನಕುಲ-ಸಹದೇವರಂತೆ ಸೋಲ್ತು ॥

ವರಮಾತೆ ನಿಜಮಾತೆಯೆನಿಸಿರ್ದ ಕುಂತಿಯಂ ।
ಸ್ಮರಿಸಿ ಸೆರೆಯಾಳುಗಳ ಶಿರಗಳಂ ಖಂಡಿಸದೆ ।
ವರಜೀವದಾನವಂ ಮಾಡಿದಂ ತೋಷದಿಂ ಪಗೆಗಳ್ಗೆ ಬಂಧುಗಳ್ಗೆ ॥

(೮) ಕಡುಪರಾಕ್ರಮಿಯಾದ ನರನೊಡನೆ ಪೊಗಳ್ವಂತೆ ।
ಕಡುಮುಳಿದು ಕಾದುತಿರೆ ಸಮರದೊಳ್ ಮನದೊಳಗೆ ।
ಪೊಡವಿಯೊಳ್ ಶಸ್ತ್ರಾಸ್ತ್ರವಿದ್ಯೆಯೊಳು ಬಲ್ಲಿದನು ಕೌಂತೇಯನೆಂದು ॥

ಪೊಡವಿಯಂ ನೋಯಿಸೆಂ ವೀರಪುತ್ರನ ಕೊಂದು ।
ಮಡಿವನ್ನೆ ಮನುಜನೆಂಬುದನರಿತು ವೀರೇಶ । ಮಡಿ-
ಯಲಾ ಪಗೆಯಿಂದ ಪೂಮಳೆಯು ಸುರಿಯಿತ್ತೈ ಕರ್ಣನೇ ದಾತನೆಂದು ॥

೧೫ ಪತಿವ್ರತೋಪದೇಶ.

ಸತಿಯಳಿಗೆ ಪತಿಯೆ ತಾ ಗತಿಯೆಂದು ನಂಬುವದು ॥
ಪತಿಸೇವೆಯಿಂದ ಬಹು ಸುಖವು ಲಭಿಸುವದು ॥ ಪಲ್ಲ ॥

ತಂದೆ-ತಾಯ್ಗಳು ನಿಮ್ಮ ಚಿಕ್ಕಂದು ಪಾಲಿಸುತ ।
ಮುಂದೆ ಹಿತವನು ಬಯಸಿ ವರನನ್ನು ಹುಡುಕಿ ॥
ಸುಂದರಾಂಗನು ಯಾರು? ಗುಣವಂತನಾರೆಂದು ।
ತಂದು ಲಗ್ನವ ಗೆಯ್ದು ಮೋದಹೊಂದುವರು ॥ ೧ ॥

ಅತ್ತೆಮನೆಯೊಳು ನಿಂತು ಮಾವ-ಭಾವಂದಿರನು ।
ನಿತ್ಯದೊಳು ಸೇವಿಸುತ ಪತಿಯಾಜ್ಞೆಯಿರಲು ॥
ಚಿತ್ತಶಾಂತತೆ ಪಡೆದು ಸುಗುಣೆಯೆಂದೆನಿಸುತ್ತೆ ।
ಪೆತ್ತ ತಾಯ್ತಂದೆಗಳ ಪೆಸರ ಮೆರಿಸುವದು ॥ ೨ ॥

ಪರಮತೀರ್ಥಗಳೇಕೆ? ಜಪ-ತಪಸ್ಸುಗಳೇಕೆ? ।
ಪರಮಪೂಜ್ಯನ ದಯದಿ ಪುಣ್ಯ ಘಟಿಸುವದು ॥
ವರಕಾಂತ ಪರಮಾತ್ಮನೆಂದರಿದು ಸಂತತಂ ।
ವರಪಾದವನು ಪಿಡಿದು ಪಾಪ ಕಳೆಯುವದು ॥ ೩ ॥

ತರತರದ ಕಾರ್ಯಂಗಳಿಂದ ಬೇಸರಪಟ್ಟು ।
ಹರಿಹಾಯ್ವ ನಿಮ್ಮರಸನನ್ನು ಕರೆತಂದು ॥
ಸರಸ ಸಲ್ಲಾಪದಿಂ ಮನವ ಸಂತಸಪಡಿಸಿ ।
ಅರಿಕೆಮಾಡುವದು ನೀವ್ ಮನೆಗೆಲಸದೊಳಗೆ ॥ ೪ ॥

ದೊಡ್ಡವರ ಮಗಳೆಂದು ವಿದ್ಯೆ ಕಲಿತವಳೆಂದು ।
ಗುದ್ದಾಡಿ ಗಂಡನೊಳು ದೂರಾಡಬೇಡ ॥

ಇದ್ದುದಿಲ್ಲೆನ್ನುತ್ತೆ ಪತಿಯನ್ನು ಪೀಡಿಸದೆ ।
  ಬಿದ್ದುಬೇಡುತಲಿಲ್ಲದುದನು ತರಿಸುವದು ॥ ೫ ॥

ತನ್ನ ತಾಯ್ತಂದೆ ಬಾಂಧವರು ಬಂದಿಹರೆಂದು ।
  ಮನ್ನಿಸುತೆ ಪಕ್ವಾನ್ನ ಬಡಿಪುದತಿಶಯದಿ ॥
ಭಿನ್ನಭೇದವ ಮಾಡುವದು ಕಾಂತನಾಪ್ತರೊಳು ।
  ಚನ್ನೆಯಿದು ತರವಲ್ಲವೆಲ್ಲರುಪಚರಿಸು ॥ ೬ ॥

ಚಾಡಿಗಾರರ ನುಡಿಗೆ ಕಿವಿಗೊಟ್ಟು ನಾಲ್ವರೊಳ- ।
  ಗಾಡುಂಬ ಕಾಂತನೊಳು ಮನೆಯ ದೂಷಣೆಯ ॥
ನಾಡುತೊಂಟಿಗರಾಗಿ ನರಳುತಿದ್ದವರೀಗ ।
  ನೋಡಿಕೊಂಡಿಹರೊಡಕು ಕೆಡಕು ನಿಶ್ಚಯವು ॥ ೭ ॥

ಕಾಂತನಿಲ್ಲದ ಕಾಲದಲ್ಲಿ ಭೂಷಣವೇಕೆ? ।
  ಭ್ರಾಂತಿಯಿಂ ಪರರೊಡನೆ ಮಾತಾಡಬೇಕೆ? ॥
ಶಾಂತಿಕರ ಕೇಳುತೆಲ್ಲಿರ್ಪನೆಂತಿಹನೆಂದು ।
  ಕಾಂತ ಬರುತಿರುವ ದಾರಿಯನೆ ನೋಡುವದು ॥ ೮ ॥

ಸಿರಿವಂತನಾದರೇಂ? ತಿರಕನಾಗಿರಲೇನು? ।
  ಸಿರಿಕೃಷ್ಣನಂತೆ ಕಾಂತನ ಪೂಜಿಸುವದು ॥
ತರುಣಿ! ಪತಿಯನು ನೀನು ಭಕ್ತಿಯಿಂದುಪಚರಿಸೆ ।
  ವರ ಶಕ್ತಿ-ಯುಕ್ತಿ-ಸಂತತಿ-ಕೀರ್ತಿಯುಹುದು ॥ ೯ ॥

೧೬ ದುಷ್ಕೃತ್ಯಕ್ಕೆ ತಕ್ಕ ಪ್ರಾಯಶ್ಚಿತ್ತ.

॥ ವಾರ್ಧಿಕ ಷಟ್ಪದಿ. ॥

(೧) ಒಂದು ಕಾಕವು ತನ್ನ ದೇಹವನು ಸಲೆ ಬಣ್ಣ ।
ದಿಂದ ಸಿಂಗರಿಸಿ ಹಂಸಾಳಿಯೊಳು ಸೇರಿರಲ್ । ಒಂದನೊಡ
ನೊಂದು ಸಂಭಾಷಿಸುವ ಸಮಯದೊಳ್ ನೈಜದಿಂ "ಕಾಕಾ"ಯೆನೆ ॥
ಅಂದವನು ತಿಳಿದದರ ನಿಂದ್ಯನೇ! ಕಪಟತನ ।
ದಿಂದಿಹುದು ತಕ್ಕುದಲ್ಲೆಂದು ಹಂಸಗಳುಮನ । ಬಂದಂತೆ
ಬೈದು ಚುಂಚುಗಳಿಂದ ಚುಚ್ಚುತ್ತೆ ಕೊಂದವದನೇನೆಂಬೆನು ॥

೧೭ ಸತ್ಯಪ್ರಭಾವ.

॥ ಭೋಗ ಷಟ್ಪದಿ. ॥

ದಿನಪ ನೀನು ಬೆಳಗುತಿರುವೆ । ದಿನದೆ ಧರೆಯ ಮೇಘದೊಳಗೆ ।
ದಿನದಿನಕ್ಕೆ ಸೆರೆಯುಬಿದ್ದು ತೊಳಲಿ ಬಳಲುವೆ ॥
ಜನರು ನಿಂದಿಸುವರು ಬಿಡದೆ । ಇನನು ಹಿಮಕೆ ಬೆದರುತಿಹನು ।
ಮನದೆ ಕಾಂತಿ ಹೀನನೆಂದು ಗ್ರಹಣಕಾಲದೆ ॥ ೧ ॥

ಮೆರೆಯುತಿಹೆನು ದಿನದೆ, ನಿಶೆಯೊ । ಳಿರದೆ ಸರ್ವ ಧರಣಿಯಲ್ಲಿ ।
ಅರಿಗಳಿಲ್ಲವೆನಗೆ ನಿತ್ಯನಿಹೆನು ದಿನಪನೇ ॥
ಒರೆಯುತಿಹುದು ಲೋಕ ಸತ್ಯ । ವಿರಲು ಭೀತಿಯಿಲ್ಲವೆಂದು ।
ಪರಮ ಶಾಂತ ಮೂರ್ತಿ ಚಂದ್ರನಿಂದ ಧನ್ಯನು ॥ ೨ ॥

೧೮ ಗೇರಸಪ್ಪೆಯ ತಡಸಲು.

॥ ವಾರ್ಧಿಕ ಷಟ್ಪದಿ. ॥

(೧) ಮೈಸೂರ ಸೀಮೆಯೊಳಗುದಯಿಸಿದ ಲಲಿತಾಂಗಿ ।
ಮೈಸಿರಿಗೆ ಲಕ್ಕಣದ ತೊಡವುಗಳ ತೊಟ್ಟು ತಾಂ । ತೋಷದಿಂ
ದಿಸಿಯನಾಗರಕೆ ಕಿರಿದೆಡೆಯ ಪೋಗಲ್ ಜನ್ಮಭೂಪ್ರೇಮದ ॥
ಪಾಶದಲಿ ತೊಡರ್ದು ನೆರೆಮರವಟ್ಟು ಚಿಂತೆಯಿಂ- ।
ದಾಸತಿಯು ನೇತ್ರಂಗಳಿಂ ಸುರಿಸೆ ಕಣ್ಣೀರ ।
ರಾಶಿ ಮೆಲ್ಲನೆ ಹರಿದು ಡಂಗುರವ ಸಾರುತ್ತ ತಾಂ ಶರಾವತಿಯೆಂದುದು ॥

(೨) ಚಂದದಿಂದೀ ಶರಾವತಿ ಮುಂದೆ ತಾಂಪೋಗಿ ॥
ಪೊಂದಲಾ ಸಹ್ಯಾದ್ರ್ಯಗಾಧ ಶಿರದೊಳು ಕಾಂಬ ।
ಚೆಂದವಾದಬ್ಬರದ, ಬಾಣ, ರಾಜಾ, ಗೌರವನಿತೆ ತಡಸಲುಗಳೀ[illegible] ॥
ಮಂದಭಾಗ್ಯನು ನಮ್ಮಯೆಸಕಮಂ ನೋಡದವ ।
ನಂಧಕನ ತೆರದಿ ನಾಣ್ಗುಂದಿಪನು ಹೀಗೆಂದು । ನಿಂದಿ-
ಸುತ ಕುಂದಿಲ್ಲದಿರ್ಪವವು ಸಂಭ್ರಮದಿ ಗೇರ್ಸಪ್ಪೆಮೂಡಲದೊಳು ॥

(೩) ಅಲ್ಲಿಗಲ್ಲಿಗೆ ತನ್ನ ಚಲ್ವಿಕೆಯ ಚಲ್ಲುತ್ತ ।
ಜೊಲ್ಲ ಜೊಲ್ಲನೆ ಬೀಳ್ವ ಕಟ್ಟುದ್ದ ಪರಿವಡೆದ ।
ಬಲ್ಲುಲಿಯ ಸಲಿಲಗಳನೇನೆಂದು ಬಣ್ಣಿಸಲಿ "**ರಾಜಾ**"ನ ಪತ್ತೆಸಾರ್ದು ॥
ಪುಲ್ಲವಡಿಗಿತಿಯ ಕರಪಲ್ಲವದೊಳೆಸೆವ ಬಹು- ।
ಮಲ್ಲಿಗೆಯ ಮೊಗ್ಗೆಗಳೊ! ರತ್ನದೊಳ್ ಸರಗಳೊ? ।
ಸಲ್ಲಲಿತ ಲಲನೆಯರ ಪಲ್ಲುಗಳೊ! ಪೇಳಲಚ್ಚರಿಯಾಯ್ತುದೇನೆಂಬೆನು ॥

(೪) ಸಾಟಿಯಾರಬ್ಬರದೆ ಪೇಳೀಗ ವನಗೆ ನೀಂ ।
ನೋಟಕರ ಚಿತ್ತಚಾಂಚಲ್ಯಮಾಳ್ಪೆನೆನುತ್ತ । ಮಾಟದಿಂ
'ರಾಜಾ'ನ ಹಿಂದೊಂದು ಗಂಹರವ ಸೇರಿತ**ಬ್ಬರ** ರೋಷದಿ ॥

ಓಟದಿಂ ಜಲಶರಂಗಳ ಬಿಡುತ ತುರಿಪದಿಂ । ನೋಟ-
ವೇ ಪೊಸಪೊಸತು ಕಾಂಬಂತೆ ಚಂದದಿಂ । ದಾಟವಾಡುತ
ಮೇಲೆ ಕೆಳಗಾಗಿ ಪೂಬಾಣನಂ ಮೀರುವುದು **ಬಾಣವು** ॥

(೫) ಸರಸದಿಂ ನೊರೆದುಂಬಿ ಮೆಲ್ಲಮೆಲ್ಲನೆ ಹರಿದು ।
ಸರತಿಯಿಂ ಕೊಳ್ಳದಲಿ ಕಲ್ಲು-ನೀರ್ಗಳ ಮೇಲೆ ।
ಎರಚುವದು ನೀರ ಮುತ್ತಿನಹಾರ ವರ್ಣನಾತೀತವೀ ರಮಣೀಯತೆ ॥
ತರತರದ ನೋಟಗಳ ಬೀರುತ್ತೆ ಜನರನ್ನು ।
ಮರುಳುಗೊಳಿಸುತ್ತೆ ತಾನುರುತರದ ಸೊಬಗಿನಿಂ ।
ತರುಣಿಯರ ಪೆಸರನ್ನು ನಿಂದಿಸುತ್ತಾತಾಣದಲ್ಲಿಹುದು **ಗೌರವನಿತಾ** ॥

(೬) ಕೊಳ್ಳದೊಳಗಿಳಿದು ನೋಡಲು ಪಾಲೊ! ಸಲಿಲವೋ!
ಅಲ್ಲಲ್ಲಿ ತೋರ್ಪ ಬಹು ಬಣ್ಣಗಳ ತೋರಣಗ- । ಳಿಲ್ಲ
ನನೆಗಣೆಯನ ಶರಂಗಳೋ! ತಿಳಿಯದಾತಾಣದೊಳದೇಂ ರಮ್ಯವೋ! ॥
ಅಲ್ಲಲ್ಲಿ ಬಂಡೆಗಳ ಬುಡಸಾರ್ದು ಕಣ್ದೆರೆದು ।
ಸಿಲ್ಲು ಸಿಲ್ಲೆನ್ನುವದು ನೋಡಲಲ್ಲಿಂದಲ್ಲಿ । ಎಲ್ಲರಿಂ ಬಣ್ಣಿಸ-
ಲಸಾಧ್ಯ ತೋರ್ಕೆಯ ಜೋಗು **ವಿಠಲೇಶನಿಂ** ಪುಟ್ಟಿರೆ ॥

ಸುಗುಣಾಭರಣಂ.

ಕಂದ.

ಕೊರಲಂ ಸುತ್ತಿದ ಸರ್ಪಂ । ಮರಳುವದೇಂ ಬರಿದೆ
ತಾನು ಕಚ್ಚದೆ ಮರುಳಾ ॥ ದುರುಳರ ಸಂಗದೊಳಿರ್ಪಂ ।
ಗುರಿಯಾಗನೆ ಬಂಧನಕ್ಕೆ ಸುಗುಣಾಭರಣಾ ॥ ೧ ॥

ಸುರಲೋಕಂ ಪಾಳ್ಪೋಕುಮೆ । ನರಿಯೂಳಿಡೆ ಬಿಡದೆ
ಸಜ್ಜನರುಗಳ ದುಷ್ಟಾ- ॥ ತ್ಮರು ಸಲೆ ನಿಂದಿಸೆ ಸತತಂ ।
ಕೊರತೆಯದೇಂ ಸಜ್ಜನರ್ಗೆ ಸುಗುಣಾಭರಣಾ ॥ ೨ ॥

ಕೋಗಿಲೆಯ ಬಣ್ಣಮುಳ್ಳೊಡೆ । ಕಾಗೆಗೆ ನಾವ್ ಕರೆಯಬಹುದೆ
ಕೋಗಿಲೆಯೆಂದೇ ॥ ಲೋಗರ ಮನವಂ ತಿಳಿಯದೆ ।
ಸೋಗಿಗೆ ಮರುಳಾಗಬೇಡ ಸುಗುಣಾಭರಣಾ ॥ ೩ ॥

ಕಾನನದೊಳು ಬೆಳದಿಂಗಳು । ತಾನುರೆ ಬಿದ್ದಿರಲು
ಮಾನವಂಗೇನದರಿಂ ॥ ಜೀನನ ಕೈಯ್ಯೊಳ್ ಧನವಿರ- ।
ಲೇನದನುರಿಗಿಕ್ಕದಲ್ತೆ ಸುಗುಣಾಭರಣಾ ॥ ೪ ॥

ನರಿ ತಾಂ ತನ್ನಯ ಮೈಯೊಳ್ । ಬರೆಯನ್ನೆಳಕೊಂಡರೇನು
ಪುಲಿಯಪ್ಪುದೆ ಪೇಳ್ ॥ ಅರಿವಿಲ್ಲದವನ ಕಜ್ಜಂ ।
ಪರಿಹಾಸ್ಯಕೆ ಬೀಳದಿರದೆ ಸುಗುಣಾಭರಣಾ ॥ ೫ ॥

ವಾನರನ ಕರದೊಳಿರ್ದೊಡೆ । ಮಾಣಿಕವದರಿಂದಲೇನು
ಫಲವೈ ಮನುಜಾ ॥ ಹೀನನ ಬಳಿಯೊಳ್ ಘನವಿ- ।
ದ್ಯಾನಿಧಿಯಿರಲೇನು ಫಲವು ಸುಗುಣಾಭರಣಾ ॥ ೬ ॥

ನೀರೇರಲು ತಾಂ ಹಿಗ್ಗದು । ನೀರಿಳಿಯಲು ಮತ್ತೆ ಕುಗ್ಗ-
ದಂಬುಧಿ ನಿಜದಿಂ ॥ ಸೇರಲು ಸಿರಿಯುಬ್ಬದಿರ್ಕೈ ।
ಜಾರಲ್ ವ್ಯಥೆ ಮಾಡಬೇಡ ಸುಗುಣಾಭರಣಾ ॥ ೭ ॥

ಇರುವೆಯು ತಾಂ ಬೇಸಿಗೆಯೊಳು । ಭರದಿಂ ದುಡಿದಿಟ್ಟು ಕೂತು
ತಿನ್ನದೆ ಮಳೆಯೊಳ್ ॥ ಹರೆಯದೆ ಸಂಗ್ರಹಿಸಿಟ್ಟರೆ ।
ಜರೆಯೊಳ್ ಸುಖವಹುದು ಕೇಳು ಸುಗುಣಾಭರಣಾ ॥ ೮ ॥

ಶೃಂಗಾರದ ಚೂರಿಯಿಂದೆಂ- । ದಂಗಕ್ಕಾಲಿಂಗಿಸಲ್ಕೆ
ಸೀಳದೆ ಅಪರಾ- ॥ ಧಂಗಳ ನೆಗಳ್ದಂ ಮಗನೆಂ- ।
ದಂಗೀಕೃತ ಮಾಡಬೇಡ ಸುಗುಣಾಭರಣಾ ॥ ೯ ॥

ಎಡೆಬಿಡದೆ ಬಿದ್ದ ನೋಣಂ । ತಡೆಯುತೆ ಬೀಡನ್ನು ಕಟ್ಟು
ವದು ಜೇಡವು ತಾಂ ॥ ತೊಡರಂಗಳಿಗಂಜದೆ ನೀಂ ।
ಪಿಡಿದಿಹ ಕಾರ್ಯವನು ಮಾಡು ಸುಗುಣಾಭರಣಾ ॥೧೦॥

ಜಗುಲಿಯ ಹಾರದ ಮನುಜಂ । ಗಗನವ ತಾಂ ಹಾರಬಲ್ಲ
ನೇನೈ ಮೊದಲೊಳ್ ॥ ಹಗುರಾಗಿಹ ಕಜ್ಜಗಳಂ ।
ಜಗ ಜನವೊಪ್ಪಂತೆ ಮಾಡು ಸುಗುಣಾಭರಣಾ ॥೧೧॥

ಸೀರದ ಗರ್ಜಿಪುದೆನ್ನುತೆ । ನೀರಾಟವ ತೊರೆವುದೇನು
ಸಾರಮರಾಳಂ ॥ ದೂರಿಗರ ದೂರಿಗಳುಕದೆ ।
ಕೋರಿದ ಕಾರ್ಯಗಳ ಮಾಡು ಸುಗುಣಾಭರಣಾ ॥೧೨॥

ಸಾರ ಮರಾಳಂ ಪಾಲೊಳ್ । ಸೇರಿಹ ನೀರನ್ನು ಬೇರೆ
ಮಾಡುತೆ ಕುಡಿಗುಂ ॥ ದೂರಿರಿಸು ಪರರ ಕುಗುಣವ ।
ಸೇರಿಸು ಸದ್ಗುಣವ ನೀನು ಸುಗುಣಾಭರಣಾ ॥೧೩॥

ಕಾಗೆಗೆ ಪಾಲಂ ಕುಡಿಸಲ್ಕು । ಕಾಗೆಯು ತಾಂ ಬೆಳ್ಳಗಪ್ಪು-
ದೇನೈ ಮನುಜಾ ॥ ಏಗೆಯ್ದೊಡ ಮಥಮುಂ ತಾಂ ।
ನೀಗನು ಕೀಳ್ಗೆಯ್ಮೆಯನ್ನು ಸುಗುಣಾಭರಣಾ ॥ ೧೪ ॥

ಕೆಸರೋಳ್ ಪುಟ್ಟಿದ ಕಮಲಂ । ಕೆಸರಂ ತಾಂ ಬಿಟ್ಟು ಮೇ-
ಲೆ ಶೋಭಿಸುತಿಹುದೈ ॥ ವಿಷಯದೆ ನೀಂ ಪುಟ್ಟಿದೊಡಂ ।
ಎಸೆಯುವ ನಾಕವನು ನೋಡು ಸುಗುಣಾಭರಣಾ ॥೧೫॥

ಕೊಳಕಾದ ಸಿಂಪೆಯೊಳ್ ಸಲೆ । ಬೆಳೆದಿಹ ಮೌಕ್ತಿಕವು
ರಾಜ ಮುಕುಟದೆ ನಿಲ್ಗುಂ ॥ ಪಳಿಯೇಂ ಸದ್ಗುಣವಂತಗೆ ।
ಕುಲಹೀನತೆಯಿಂದ ಕೇಳು ಸುಗುಣಾಭರಣಾ ॥೧೬॥

ರದಗಳ ಮಧ್ಯದೆ ಜಿಹ್ವೆಯು । ಪುದುವಾಳದೆ ತನ್ನ ಬುದ್ಧಿ
ಚಾಪಲ್ಯತೆಯಿಂ ॥ ಅಧಮರ ಮಧ್ಯದೆ ಮನುಜಂ ।
ಚದುರತೆಯಿಂದಿರಲುಬೇಕು ಸುಗುಣಾಭರಣಾ ॥ ೧೭ ॥

ಭತ್ತದ ತೆನೆಯದು ತನ್ನಂ । ಪೆತ್ತವಳೆನ್ನುತ್ತೆ ಭೂತಳಕ್ಕೆ
ನಮಿಪುದೈ । ನಿತ್ಯಂ ಮನುಜಂ ತನ್ನಂ ।
ಪೆತ್ತವರಿಗೆ ಬಾಗಬೇಕು ಸುಗುಣಾಭರಣಾ ॥ ೧೮ ॥

ಕತ್ತುರಿಯುಂ ಕೈಯೊಳ್ ಪಿಡಿ- । ದೆತ್ತೆತ್ತ ಚಲಿಸಿದೊಡಮಲ್ಲಿ
ವಾಸನೆ ಬಕ್ಕುಂ ॥ ಉತ್ತಮ ವಿದ್ವಾಂಸಂ ಸ- ।
ರ್ವತ್ರಂ ಸಲೆ ಪೂಜ್ಯನಹುದು ಸುಗುಣಾಭರಣಾ ॥ ೧೯ ॥

ಬಿಸಿಲೊಳ್ ಬಳಲುವನಂ ಸಂ- । ತಸದಿಂ ಕರೆತಂದು ತಣ್ಪ-
ನೀವುದು ವೃಕ್ಷಂ ॥ ಹಸಿವೆಯೊಳು ಬಳಲುತಿಹನಂ ।
ಅಸನವ ನೀನಿತ್ತು ಕಾಯೊ ಸುಗುಣಾಭರಣಾ ॥ ೨೦ ॥

ನೀರದ ಕವಿದಿರೆ ಚಂದ್ರಂ । ಬೀರನೆ ತಂಪನ್ನು ಧರೆಗೆ
ಮಹಿಮಾತ್ಮರುಗಳ್ ॥ ದೂರಿರಿಸಿ ತಮ್ಮ ಕಷ್ಟವ ।
ತೋರಿಪರೈ ದಯವ ಜನಕೆ ಸುಗುಣಾಭರಣಾ ॥ ೨೧॥

ಪನಿ-ಪನಿ ಕೂಡಲ್ ಪಳ್ಳಂ । ತೆನೆ-ತೆನೆಯೊಂದಾಗೆ ರಾಶಿ
ಯಪ್ಪುದು ಕೇಳೈ ॥ ದಿನ-ದಿನ ಕಲಿಯಲ್ ವಿದ್ಯಾ- ।
ಧನದಿಂ ತುಂಬುವದು ಮನವು ಸುಗುಣಾಭರಣಾ ॥೨೨॥

ಬಂಗಾರದ ಚೂರಿಯಿದೆಂ- । ದಂಗಕ್ಕಾಲಿಂಗಿಸಲ್ಕೆ
ಸೀಳದೆ ಅಪರಾ- ॥ ಧಂಗಳ ನೆಗಳ್ದಂ ಮಗನೆಂ- ।
ದಂಗೀಕೃತ ಮಾಡಬೇಡ ಸುಗುಣಾಭರಣಾ ॥ ೯ ॥

ಎಡೆಬಿಡದೆ ಬಿದ್ದ ನೋವಂ । ತಡೆಯುತೆ ಬೀಡನ್ನು ಕಟ್ಟು
ವದು ಜೇಡವು ತಾಂ ॥ ತೊಡರಂಗಳಿಗಂಜದೆ ನೀಂ ।
ಪಿಡಿದಿಹ ಕಾರ್ಯವನು ಮಾಡು ಸುಗುಣಾಭರಣಾ ॥೧೦॥

ಜಗುಲಿಯ ಹಾರದ ಮನುಜಂ । ಗಗನವ ತಾಂ ಹಾರಬಲ್ಲ
ನೇನ್ನೈ ಮೊದಲೊಳ್ ॥ ಹಗುರಾಗಿಹ ಕಜ್ಜಗಳಂ ।
ಜಗ ಜನವೊಪ್ಪುಂತೆ ಮಾಡು ಸುಗುಣಾಭರಣಾ ॥ ೧೧ ॥

ನೀರದ ಗರ್ಜಿಪುದೆನ್ನುತೆ । ನೀರಾಟವ ತೊರೆವುದೇನು
ಸಾರಮರಾಳಂ ॥ ದೂರಿಗರ ದೂರಿಗಳುಕದೆ ।
ಕೋರಿದ ಕಾರ್ಯಗಳ ಮಾಡು ಸುಗುಣಾಭರಣಾ ॥೧೨॥

ಸಾರ ಮರಾಳಂ ಪಾಲೊಳ್ । ಸೇರಿಹ ನೀರನ್ನು ಬೇರೆ
ಮಾಡುತೆ ಕುಡಿಗುಂ ॥ ದೂರಿರಿಸು ಪರರ ಕುಗುಣವ ।
ಸೇರಿಸು ಸದ್ಗುಣವ ನೀನು ಸುಗುಣಾಭರಣಾ ॥೧೩॥

ಕಾಗೆಗೆ ಪಾಲಂ ಕುಡಿಸಲು । ಕಾಗೆಯು ತಾಂ ಬೆಳ್ಳಗಪ್ಪು-
ದೇನ್ನೈ ಮನುಜಾ ॥ ಏಗೆಯ್ದೊಡ ಮಧಮಂ ತಾಂ ।
ನೀಗನು ಕೀಳ್ಗೆಯ್ಮೆಯನ್ನು ಸುಗುಣಾಭರಣಾ ॥ ೧೪ ॥

ಕೆಸರೊಳ್ ಪುಟ್ಟಿದ ಕಮಲಂ । ಕೆಸರಂ ತಾಂ ಬಿಟ್ಟು ಮೇ-
ಲೆ ಶೋಭಿಸುತಿಹುದೈ ॥ ವಿಷಯದೆ ನೀಂ ಪುಟ್ಟಿದೊಡಂ ।
ಎಸೆಯುವ ಸಾಕವನು ನೋಡು ಸುಗುಣಾಭರಣಾ ॥೧೫॥

ಕೊಳಕಾದ ಸಿಂಪೆಯೊಳ್ ಸಲೆ । ಬೆಳೆದಿಹ ಮೌಕ್ತಿಕವು
ರಾಜ ಮುಕುಟದೆ ನಿಲ್ಗುಂ ॥ ಪಳಿಯೇಂ ಸದ್ಗುಣವಂತಗೆ ।
ಕುಲಹೀನತೆಯಿಂದ ಕೇಳು ಸುಗುಣಾಭರಣಾ ॥೧೬॥

ರದಗಳ ಮಧ್ಯದೆ ಜಿಹ್ವೆಯು । ಪುದುವಾಳದೆ ತನ್ನ ಬುದ್ಧಿ
ಚಾಪಲ್ಯತೆಯಿಂ ॥ ಅಧಮರ ಮಧ್ಯದೆ ಮನುಜಂ ।
ಚದುರತೆಯಿಂದಿರಲುಬೇಕು ಸುಗುಣಾಭರಣಾ ॥ ೧೭ ॥

ಭತ್ತದ ತೆನೆಯದು ತನ್ನಂ । ಪೆತ್ತವಳೆನ್ನುತ್ತೆ ಭೂತಳಕ್ಕೆ
ನಮಿಪುದ್ಮೆ । ನಿತ್ಯಂ ಮನುಜಂ ತನ್ನಂ ।
ಪೆತ್ತವರಿಗೆ ಬಾಗಬೇಕು ಸುಗುಣಾಭರಣಾ ॥ ೧೮ ॥

ಕತ್ತುರಿಯುಂ ಕೈಯೊಳ್ ಪಿಡಿ- । ದೆತ್ತೆತ್ತ ಚಲಿಸಿದೊಡಮಲ್ಲಿ
ವಾಸನೆ ಬಕ್ಕುಂ ॥ ಉತ್ತಮ ವಿದ್ವಾಂಸಂ ಸ- ।
ರ್ವತ್ರಂ ಸಲೆ ಪೂಜ್ಯನಹುದು ಸುಗುಣಾಭರಣಾ ॥ ೧೯ ॥

ಬಿಸಿಲೊಳ್ ಬಳಲುವನಂ ಸಂ- । ತಸದಿಂ ಕರೆತಂದು ತಣ್ಪ-
ನೀವುದು ವೃಕ್ಷಂ ॥ ಹಸಿವೆಯೊಳು ಬಳಲುತಿಹನಂ ।
ಅಸನವ ನೀನಿತ್ತು ಕಾಯೊ ಸುಗುಣಾಭರಣಾ ॥ ೨೦ ॥

ನೀರದ ಕವಿದಿರೆ ಚಂದ್ರಂ । ಬೀರನೆ ತಂಪನ್ನು ಧರೆಗೆ
ಮಹಿಮಾತ್ಮರುಗಳ್ ॥ ದೂರಿರಿಸಿ ತಮ್ಮ ಕಷ್ಟವ ।
ತೋರಿಪರ್ಮೆ ದಯವ ಜನಕೆ ಸುಗುಣಾಭರಣಾ ॥ ೨೧ ॥

ಪನಿ-ಪನಿ ಕೂಡಲ್ ಪಳ್ಳಂ । ತೆನೆ-ತೆನೆಯೊಂದಾಗೆ ರಾಶಿ
ಯಪ್ಪುದು ಕೇಳ್ಮೆ ॥ ದಿನ-ದಿನ ಕಲಿಯಲ್ ವಿದ್ಯಾ- ।
ಧನದಿಂ ತುಂಬುವದು ಮನವು ಸುಗುಣಾಭರಣಾ ॥೨೨॥

ಸಲಿಗೆಯನಿತ್ತೊಡೆ ನಾಯಿ ನೊ- । ಸಲಮಂ ನೆಕ್ಕುವದದೆಂದು
ನುಡಿವರ್ ಜಗದೊಳ್ ॥ ಲಲನೆಯ ನಿತ್ಯಂ ಪೆಗಲಿನ ।
ಬಳಿಯೊಳಗಿಟ್ಟಿರಲು ಬೇಡ ಸುಗುಣಾಭರಣಾ ॥ ೨೩ ॥

ತನ್ನೊಳ್ ಬೆರೆದಿಹ ಜಲಮದು । ಖಿನ್ನತೆಯಿಂ ಪೋಗೆ ಪಾಲು
ಬೀಳ್ವುದದುರಿಯೊಳ್ ॥ ನಿನ್ನಯ ಕೆಳೆಯನ ದುಃಖಂ ।
ತನ್ನದದೆಂಬರಿವನರಿಯೊ ಸುಗುಣಾಭರಣಾ ॥ ೨೪ ॥

ತರಣಿಯ ಕಿರಣಗಳಿಂದಂ । ಕರಗದ ಚಂದ್ರೋಪಲವು
ಪೆರೆಯ ಕಿರಣಗಳಿಂದಂ ॥ ಕರಗದೆ ಸವಿನುಡಿಯಂದದೆ ।
ಬಿರುನುಡಿಯಿಂ ಕಾರ್ಯವಹುದೆ ಸುಗುಣಾಭರಣಾ ॥ ೨೫ ॥

ಮಲ್ಲಿಗೆಯ ಮಾಲೆಯೊಳಗಿಹ । ವಲ್ಲಿಯು ತಾನುಚ್ಚಪದವ
ಸೇರದೆ ಮನುಜಾ ॥ ಒಳ್ಳಿದರ ಸಂಗ ಪಿಡಿದವ ।
ನೊಳ್ಳಿದನವನಪ್ಪುದರಿದೆ ಸುಗುಣಾಭರಣಾ ॥ ೨೬ ॥

ಕ್ಷೀರಂ ತನ್ನಂ ಬೆರೆದಿಹ । ನೀರಿಗೆ ತನ್ನಂತೆ ರುಚಿಯ
ನೀವುದು ನಿತ್ಯಂ ॥ ಸೇರಲ್ ಸಜ್ಜನ ಸಂಗವ ।
ಸಾರ ಸುಖಾನಂದವಹುದು ಸುಗುಣಾಭರಣಾ ॥ ೨೭ ॥

ಅರಳಲು ಕಮಲಂ ಭ್ರಮರಂ । ಭರದಿಂದೈತಂದು ಮಧು-
ವ ನೀಂಟದೆ ಪೇಳ್ಕೈ ॥ ವರವಿದ್ಯಾಮೃತದಿಂ ತುಂ- ।
ಬಿರೆ ನಿನ್ನಂ ಮನ್ನಿಸುವರು ಸುಗುಣಾಭರಣಾ ॥ ೨೮ ॥

ಜಲವನ್ನಿತ್ತಿಹ ಜಲಧಿಗೆ । ಜಲಮಂ ತಾನೀಯದೇನು
ಬೇಡದೆ ಮೇಘಂ ॥ ಇಳೆಯೊಳ್ ಬೇಡದೆ ಕೊಡುವಗೆ ।
ನಲಿದಿತ್ತಪರೆಂಬುದರಿಯೊ ಸುಗುಣಾಭರಣಾ ॥ ೨೯ ॥

ಸರಸಿಗಳ ಗಣಿತವಿರಲೇಂ । ಅರಸಂಚೆಯು ಬಯಸುತಿಹು-
ದು ಮಾನಸಸರಮಂ ॥ ಧರೆಯೊಳ್ ಧನಿಕರ್ ತುಂಬಿರೆ ।
ಸಿರಿಯಂ ಪಡೆ ಯೋಗ್ಯರಲ್ಲಿ ಸುಗುಣಾಭರಣಾ ॥ ೩೦ ॥

ಹರನಂ ಸೇರಿದ ಭುಜಗಂ । ಗರುಡನ ಭಯವನ್ನು ತಾನು
ಲೆಕ್ಕಿಪುದೇನ್ನೈ ॥ ಸಿರುತಂ ಘನಪುರುಷರುಗಳ ।
ಮರೆಯಂ ನೀಂ ಸೇರಿ ಬಾಳು ಸುಗುಣಾಭರಣಾ ॥೩೧॥

ಕಾಗೆಯ ಗುಂಪಿನೊಳಿರುತಿಹ । ಕೋಗಿಲೆ ತಾಂ ರಾಗ
ಪಾಡದಿರಲೆಂತರಿಗುಂ ॥ ಸಾಗದು ಮೂಢರ ಸಭೆಯೊಳ್ ।
ಮೂಗನ ತೆರವಿರಲು ವಿಬುಧ ಸುಗುಣಾಭರಣಾ ॥ ೩೨ ॥

ನಾನೊಬ್ಬನು.

॥ ವಾರ್ಧಿಕ ಷಟ್ಪದಿ. ॥

(೧) ಶರಧಿಯೊಳಗಿರಲುಶಗ-ವ್ಯಾಘ್ರ-ಸಿಂಹಗಳಲ್ಲ ।
ಹರಿಯೆಂಬ ಪೆಸರಿರಲು ಸಿರಿಯರಸ ನಾನಲ್ಲ ।
ಧರೆಯಿಂದ ಜನ್ಮಿಸಿದ ಮಂಗನಲ್ಲವು ಬಾಲಧರಸಿರಲು ಗಿರಿಶನಲ್ಲ ॥
ಕರಗಳೆರಡಿರೆ ಮೆರೆವ ನರನಲ್ಲ ಧರೆಯಲ್ಲಿ ।
ಚರಿಸುತಿರೆ ಪದಚತುಷ್ಟಯಗಳಿಂ ನರನಲ್ಲ ।
ತರುವಿನಿಂ ತರುವಿಂಗೆ ಹಾರಾಡುತಿರೆ ವಿಹಂಗಮನಲ್ಲ ದನುಜನಲ್ಲ ॥

ನಾರೀಮಣಿಯೋ! ಯೋಗಿಯೋ!

॥ ವಾರ್ಧಿಕ ಷಟ್ಪದಿ ॥

(೧) ಕೇಶಂಗಳಿರೆ ನಿಯಮದಿಂ ಶ್ರುತಿಯ ಪಾರಮಂ।
ತೋಷದಿಂ ನೋಡುತಿರೆ ನೇತ್ರಗಳ್, ದ್ವಿಜಗಣಾ।
ವಾಸಮಾಗಿರೆ ಮುಖಂ, ಕುಂಭಕುಚಯುಗಲಮುಕ್ತಾನಂದದಲ್ಲಿರುತಿರೆ ॥
ಲೇಸಾಗಿ ನೋಡಲ್ ಕೃಶಾಂಗಿಯೆಂದೆನಿಸಿರಲ್।
ಕ್ಲೇಶಮಂ ಸಂಹರಿಸಿ ರಾಗಮಂ ಬೀರುತಿಹು- । ದೈ
ಸದಾ ನಿನ್ನ ಪ್ರಶಾಂತಮಾದಂಗವಿದು ಜಗಕೆಲ್ಲ ನೀನೆ ಮುದ್ದು ॥

ಸೀತೆಯ ಸೊಲ್ಲು.

॥ ವಾರ್ಧಿಕ ಷಟ್ಪದಿ. ॥

(೧) ಜನಕನಂದನೆ ಜನಪಕಂದನಾನಂದಿನೀ।
ಧನಲಕ್ಷ್ಮಿಯೆನ್ನ ಕರಕಮಲದೊಳ್ ನೆಲೆಸಿರಲು। ಮಿನು-
ಗುತಿರೆ ಕನಕ-ಮೌಕ್ತಿಕ-ರತ್ನಗಳ ವಸ್ತುಗಳು ಮದಂಗಾಂಗಗಳೊಳು ॥
ದಿನದಿನಕೆ ನೂರಾರು ದಾಸಿಯರು ಸೇವಿಪರು।
ಘನಸಾರ ತಲ್ಪದೊಳ್ ಮಲಗುವೆಂ ವಿಧಿಯಿಂದ।
ವನವಾಸವಾಯ್ತೆನ್ನ ನಲ್ಲಂಗೆ ಪದಿನಾಲ್ಕು ವರುಷಗಳು ಕೇಳಿರವ್ವಾ ॥

(೨) ದೇಶಕೋಶಂಗಳಂ ಬಂಧು ಬಳಗಂಗಳಂ।
ಭೂಷಣಾಂಬರಗಳಂ ಸಲೆ ಬಿಟ್ಟು ತವಕದಿಂ।
ಕಾಷಯಾಂಬರಗಳಂ ಬಿಗಿದುಟ್ಟು ಕೇಶಂಗಳಂ ಕಟ್ಟಿ ಬಿಲ್ಲ ತೊಟ್ಟು ॥

ಕ್ಲೇಶದಿಂ ಪೊರಮಟ್ಟ ರಾಮನಾಭಿರಾಮನಂ ।
ದಾಸಿಯಾಂ ಕಂಡು ಕಂಗೆಟ್ಟು ಪೊಡಮಟ್ಟು ಕರ- ।
ಪಾಶದಿಂ ಬಿಗಿದಪ್ಪುತ್ತನುಮತಿಯ ಪೊಂದಿ ಕಾನನಕೆ ನಡೆತಂದೆನವ್ವಾ ॥

(೩) ಕಲ್ಲು-ಮುಳ್ಳುಗಳ ಮೇಲೆ ಕಾಲಿಡುತ ದಳಭವನ- ।
ದಲ್ಲಿ ನೆಲಿಸುತ ಹಣ್ಣು-ಹಂಪಲಂಗಳ ಮೆಲ್ಲು ।
ಖುಲ್ಲಮೃಗಗಳ ಬೊಬ್ಬೆಯಬ್ಬರಣೆಯಂ ಕೇಳುತೆಲ್ಲಿಡೆಯೊಳುಂ ಸಂತತ ॥
ನಲ್ಲನಂ ಸೇವಿಸುತ ಕಾಡು-ನಾಡೆಂದು ಮನ- ।
ದಲ್ಲಿ ಭಾವಿಸುತಲಿರುತಿರಲಾಗಿ ಕದ್ದೊಯ್ದು ।
ಖುಲ್ಲರಕ್ಕಸನೆನ್ನ ನಿಜಪುರಕೆ ಕಣ್ದೆರೆದು ನೋಡಲಿಲ್ಲಾತನನ್ನು ॥

(೪) ಕನಸಿನಲಿ ಮನಸಿನಲಿ ರಾಮಮೂರ್ತಿಯ ನಿಲಿಸಿ ।
ನೆನೆನೆನೆದು ದುಗುಡದಿಂ ಕಾಲಮಂ ಕಳೆಯುತಿರೆ । ಇನಕು-
ಲೇಶನು ರಕ್ಕಸನ ತರಿದು ತರಲಯೋಧ್ಯಾಪುರಕೆ ತೋಷಮಾಯ್ತು ॥
ಇನಿಯನೊಡಗೂಡಿರಲ್ ಗರ್ಭವತಿಯಿರೆ ಮತ್ತೆ ।
ಜನತಾಪವಾದದಿಂ ತೊರೆದನೈ ಶ್ರೀರಾಮ । ವನ-
ವಾಸಮಾಯ್ತೆನಗೆ ವಿಧಿಯ ಬರಹವನಾರು ಮೀರುವರು? ಪೇಳಿರವ್ವಾ ॥

(೫) ಘೋರವನವಾದೊಡೇಂ ಕ್ರೂರ ಮೃಗವಾಸಮೇಂ ।
ಶ್ರೀರಾಮ ತೊರೆಯಲೇಂ ರಾಮನಂ ನೆನೆಯುತಿರೆ ।
ತೋರಿತ್ತೈ ವಾಲ್ಮೀಕಿಯಾಶ್ರಮವು ಪುತ್ರರಂ ಪೆತ್ತೆನಲ್ಲೀರ್ವರನ್ನು ॥
ಪೌರಜನಮೊಪ್ಪಿರಲ್ ಮುನಿಯಿವಳ್ ಶುದ್ಧೆಯೆನೆ ।
ಭೂರಿಸಂತಸದಿಂದೆ ಕರೆತಂದನೈ ಪುರಕೆ । ಸೇರಿದೆನು
ಗುಣಧಾಮನಂ … ರವ್ವಾ ॥

ರು.

